# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.763-2013** **ಸಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು | ನಾರಾಯಣ.ಸಿ |
| ತಂದೆಯ/ಗಂಡನ ಹೆಸರು | ಚೆನ್ನಯ್ಯ |
| ವಯಸ್ಸು | 44 ವರ್ಷ |
| ಉದ್ಯೋಗ | ಸರ್ವೇಯರ್ |
| ವಾಸ್ತವ್ಯ | ಉದ್ಬೂರು ಗ್ರಾಮ, ಮೈಸೂರು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 25-07-2024.** |

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದಃ-**

ನಾನು ನ್ಯಾಯಾಲಯದ ಆದೇಶದ ಮೇರೆಗೆ ಸ್ಥಳಕ್ಕೆ ಹೋಗಿ ಸರ್ವೇ ನಂ.199 ಮತ್ತು 95 ರ ಜಮೀನುಗಳ ಬಾಬ್ತು ಅಳತೆ ಕಾರ್ಯ ಪೂರೈಸಿ ನನ್ನ ವರದಿಯನ್ನು ಸಲ್ಲಿಸಿರುತ್ತೇನೆ. ನಾನು ದಿ.29-11-2022 ರಂದು ಮೊದಲಭಾರಿಗೆ ದಾವೆಯ ಉಭಯ ಪಕ್ಷಕಾರರಿಗೆ ನೋಟಿಸ್ ಅನ್ನು ನೀಡಿ ಸ್ಥಳಕ್ಕೆ ಹೋದ ಸಮಯ ಸ್ವತ್ತಿನಲ್ಲಿ ಕಬ್ಬಿನ ಬೆಳೆ ಇದ್ದುದ್ದರಿಂದ ನಾನು ಅಳತೆ ಕಾರ್ಯವನ್ನು ಮಾಡಲು ಸಾಧ್ಯವಾಗಿರುವುದಿಲ್ಲ. ನಂತರ ದಿ.04-05-2023 ರಂದು ಪುನಃ ದಾವೆಯ ಪಕ್ಷಕಾರರಿಗೆ ನೋಟಿಸ್ ಅನ್ನು ನೀಡಿ ನಂತರ ಅಳತೆ ಕಾರ್ಯಕ್ಕೆ ಹೋಗಿರುತ್ತೇನೆ. ಸಾಕ್ಷಿ ದಾವೆಯ ಉಭಯ ಪಕ್ಷಕಾರರಿಗೆ ನೀಡಿದ ನೋಟಿಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಸಿ-1 ಎಂದು, ಅಂಚೇ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಸಿ-2 ಎಂದು, ಸಾಕ್ಷಿ ತಾನು ಅಳತೆ ಮಾಡಿ ತಯಾರಿಸಿದ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿಸಿ-3 ಎಂದು, ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರ ಸೂಚನಾ ಪತ್ರಕ್ಕೆ ನೀಡಿದ ಉತ್ತರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಸಿ-4 ಮತ್ತು 5 ಎಂದು, ಹೇಳಿಕೆ ಮಹಜರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಸಿ-6 ಎಂದು ಗುರುತಿಸಲಾಯಿತು.

ನಾನು ನನ್ನ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ವಾದಿ ಪರ ಶ್ರೀ ಎಂ.ಜೇ.ಎಸ್. ವಕೀಲರಿಂದಃ-</u>**

ನಾನು ತಾಯಾರು ಮಾಡಿರುವ ನಕ್ಷೆಯಲ್ಲಿ ಎರಡು ಕೊಳವೆ ಬಾವಿಗಳನ್ನು ತೋರಿಸಿರುತ್ತೇನೆ ಎಂದರೆ ಸರಿ. ಸದರಿ ಕೊಳವೆ ಬಾವಿಗಳಿಗೆ ವಿಧ್ಯೂತ್ ಸಂಪರ್ಕ ಇತ್ತು. ಸದರಿ ಕೊಳವೆ ಬಾವಿಗಳಿಗೆ ಅಳವಡಿಸಿದ್ದ ಸ್ವಿಚ್ ಬೊರ್ಡ್ ಗಳ ಮೇಲೆ ಇದ್ದ ಐ.ಪಿ. ನಂಬರ್ ಅನ್ನು ನಾನು ಗಮನಿಸಿರುವುದಿಲ್ಲ. ನಾನು ನನ್ನ ಅಳತೆ ಸಮಯ ಸದರಿ ಕೊಳವೆ ಬಾವಿಗಳಿಗೆ ವಿಧ್ಯೂತ್ ಸಂಪರ್ಕವನ್ನು ಯಾರು ಪಡೆದಿರುತ್ತಾರೆ ಎಂಬುದರ ಬಗ್ಗೆ ವಿಚಾರಣೆ ಮಾಡಿದ್ದು, ಆ ಸಮಯ ಪ್ರತಿವಾದಿಗಳು ವಿಧ್ಯೂತ್ ಸಂಪರ್ಕವನ್ನು ತಾವು ಪಡೆದುಕೊಂಡಿರುವುದಾಗಿ ತಿಳಿಸಿದ್ದು, ಆದರೆ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಸ್ವೀಕರಿಸಿರುವುದಿಲ್ಲ. ಸರ್ವೇ ನಂ.199 ಈ ಹಿಂದೆ ಸರ್ವೇ ನಂ.95 ರ ಒಂದು ಭಾಗವಾಗಿತ್ತು ಎಂದು ನನ್ನ ನಕ್ಷೆಯಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ನಮ್ಮ ಆಕಾರ್ ಬಂದ್‌ಗೆ ಅನುಗುಣವಾಗಿ ಸರ್ವೇ ನಂ.95 ಆಗಿದ್ದು ವಿಸ್ತೀರ್ಣ 38 ಎಕರೆ 24 ಗುಂಟೆ ಆಗಿರುತ್ತದೆ. ನಿಪಿ-3 ಅನ್ನು ಪರಿಶೀಲಿಸಿದಾಗ ಸರ್ವೇ ನಂ.95 ಮತ್ತು 199 ರ ವಿಸ್ತೀರ್ಣ ಹೆಚ್ಚುಕಮ್ಮಿ ಒಂದೇ ರೀತಿ ಕಾಣುತ್ತಿರುತ್ತದೆ ಎಂದರೆ ಸರಿ. ನಾನು ಸರ್ವೇ ನಂ.95 ಅನ್ನು ಅಳತೆ ಮಾಡಿದ್ದು, ಅದರ ವಿಸ್ತೀರ್ಣ 1 ಎಕರೆ 20 ಗುಂಟೆ ಆಗಿರುತ್ತದೆ. ಹಾಗಾದರೆ ತಾವು ಸರ್ವೇ ನಂ.95 ರಲ್ಲಿ ಅಳತೆ ಮಾಡಿರುವ ಸ್ವತ್ತು ಸರ್ವೇ ನಂ.95 ರ ಪೈಕಿ ಸ್ವತ್ತಾಗುತ್ತದೆಯೇ ವಿನಃ, ಸರ್ವೇ ನಂ.95 ರ ಪೂರ್ಣ ವಿಸ್ತೀರ್ಣ ಆಗುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೇ ನಂ.95 ಪಿ ಎಂದು ನಕ್ಷೆಯಲ್ಲಿ ತೋರಿಸಲು ಸಾಧ್ಯವಾಗದೇ ಇರುವುದರಿಂದ ನನ್ನ ವರದಿಯಲ್ಲಿ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ.

2.'ಬಿ' ಖರಾಜು ಎಂದರೆ ಸರ್ಕಾರಿ ಸ್ವತ್ತು ಎಂದರೆ ಸರಿ. ಸರ್ವೇ ನಂ.95 ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನೋಡಿರುತ್ತೇನೆ.

3. ನನ್ನ ವರದಿಯಲ್ಲಿ ಸರ್ವೇ ನಂ.95 ಪಿ7 ರ ಆರ್.ಟಿ.ಸಿ ಒಟ್ಟುಗೂಡಿಸುವ ಪ್ರಕ್ರಿಯೆಯಿಂದ ಚಾಲ್ತಿ ಸಾಲಿನ ಪಹಣಿಯಲ್ಲಿ 95 ಎಂದು ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿ.

4. ಕೊಳವೆ ಬಾವಿಗಳು ವಾದಿಯವರಿಗೆ ಸೇರಿದ ಸರ್ವೇ ನಂ.199 ರಲ್ಲಿದ್ದು ಸದರಿ ಕೊಳವೆ ಬಾವಿಗಳಿಗೆ ವಾದಿಯವರು ವಿದ್ಯುತ್ ಸಂಪರ್ಕವನ್ನು ಪಡೆದಿರುವ ವಿಚಾರವನ್ನು ನನಗೆ ತಿಳಿಸಿದ್ದರೂ ಸಹ ಪ್ರತಿವಾದಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸದರಿ ಕೊಳವೆ ಬಾವಿಗಳು ಸರ್ವೇ ನಂ.95 ರಲ್ಲಿ ಇದೆ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಸಿ.ಎಸ್ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**2 ನೇ ಪ್ರ.ದ. ನ್ಯಾ ದಂ. ನಂಜನಗೂಡು**